

# ಚ್ಯೂಯಿಂಗ್ ಗಮ್ ಅಂಟಿನಲ್ಲಿ ಇತಿಹಾಸದ ನಂಟು

‘ಚ್ಯೂಯಿಂಗ್ ಗಮ್’ ಬರೀ ತಿನಿಸಲ್ಲ, ಇತಿಹಾಸ ತಿಳಿಸಬಲ್ಲ ಸಾಧನವೂ ಆಗಿದೆ. ಮಾನವರು ಅಂದೆಂದೋ ಜಗಿದು ಉಗುಳಿದ ಚ್ಯೂಯಿಂಗ್ ಗಮ್‌ನಿಂದ ಅವರ ಜೆನೋಮ್ ಅರಿಯಲು, ಆಹಾರ ಪದ್ಧತಿಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ. ಈ ಮೂಲಕ ಆ ಕಾಲಘಟ್ಟದ ಕುರುಹುಗಳನ್ನು ಅರಿಯುವ ಪ್ರಯತ್ನಗಳು ನಡೆದಿವೆ.

■ ಯು. ಶ್ರೀನಿವಾಸ ಮೂರ್ತಿ

ಕೆಲವರಿಗೆ ‘ಚ್ಯೂಯಿಂಗ್ ಗಮ್’ ಜಗಿಯುವುದು ಒಂದು ಅಭ್ಯಾಸ. ಕ್ರೀಡಾಪಟುಗಳು, ಅದರಲ್ಲೂ ಕ್ರಿಕೆಟಿಗರು ಆಟ ಆಡುವ ಸಮಯ ಸದಾ ಚ್ಯೂಯಿಂಗ್ ಗಮ್ ಅಗಿಯುವುದನ್ನು ಕಂಡಿರುತ್ತೇವೆ. ಇದು ಹವ್ಯಾಸವೋ, ಚಟವೋ, ಚಟುವಟಿಕೆಯ ಸಾಧನವೋ... ಒಟ್ಟಾರೆ ಸುಮ್ಮನೆ ಚ್ಯೂಯಿಂಗ್ ಗಮ್ ತಿನ್ನುವುದನ್ನು ಕಂಡಿರುತ್ತೇವೆ.

1984–85ರ ಕಾಲಘಟ್ಟದಲ್ಲಿ ಚ್ಯೂಯಿಂಗ್ ಗಮ್ ಕಾಲೇಜು ವಿದ್ಯಾರ್ಥಿಗಳ ಪ್ರಿಯವಾದ ತಿನಿಸಾಗಿ ಹೆಸರು ಮಾಡಿತ್ತು. ಇದನ್ನು ತಿಂದು ರಸ ಹೀರಿದ ನಂತರ ಗಾಳಿ ಊದಿ ಬಲೂನ್‌ನಂತೆ ದೊಡ್ಡದಾಗಿಸುವ ಸ್ಪರ್ಧೆಗಳು ಕೂಡ ನಡೆಯುತ್ತಿದ್ದವು. ಆ ಬಲೂನನ್ನು ಹೊಡೆದಾಗ ಬರುವ ಶಬ್ದ ಬಲು ಜನಪ್ರಿಯವಾಗಿತ್ತು, ಅದೇ, ಯುವಕರ ಉತ್ಸಾಹಕ್ಕೆ ಕಾರಣವಾಗಿತ್ತು.

ವಿಶ್ವದ ಹಲವು ದೇಶಗಳಲ್ಲಿ ಮಕ್ಕಳಿಂದ ಹಿಡಿದು ಮಧ್ಯ ವಯಸ್ಸಿನ ಅನೇಕರು ಚ್ಯೂಯಿಂಗ್ ಗಮ್ ಜಗಿಯುವರು. ಚ್ಯೂಯಿಂಗ್ ಗಮ್ ಜಗಿಯುವುದರಿಂದ ದವಡೆಗೆ ವ್ಯಾಯಾಮ ಸಿಗುತ್ತದೆ ಎಂಬ ತಪ್ಪುಕಲ್ಪನೆ ಅನೇಕರಿಗಿದೆ. ಅಂದಹಾಗೆ, ಈ ಚ್ಯೂಯಿಂಗ್ ಗಮ್ ನಿನ್ನೆ ಮೊನ್ನೆ ಅನ್ವೇಷಣೆಗೊಂಡ ತಿನಿಸಲ್ಲ. ಪ್ರಾಚೀನ ಕಾಲದಲ್ಲಿಯೂ ಇತ್ತು. ಈಗ ಆ ಕಾಲದ ಚ್ಯೂಯಿಂಗ್ ಗಮ್‌ಗಳು ಗತಕಾಲದ ಇತಿಹಾಸ ಅರಿಯಲು ಉಪಯುಕ್ತವಾಗುತ್ತಿವೆ ಎಂಬುದು ಹೊಸ ವಿಷಯ.

ಮಾನವರು ಅಂದೆಂದೋ ಜಗಿದು ಉಗುಳಿದ ಚ್ಯೂಯಿಂಗ್ ಗಮ್‌ನಲ್ಲಿ ಅವರ ಡಿಎನ್‌ಎ ಲಭ್ಯವಂತೆ. ಈ ಮೂಲಕ ಆ ಕಾಲಘಟ್ಟದ ಹಲವು ಸಂಗತಿಗಳನ್ನು ತಿಳಿಯಬಹುದಂತೆ!

ಚ್ಯೂಯಿಂಗ್ ಗಮ್‌ಗೆ ಸುದೀರ್ಘ ಇತಿಹಾಸವಿದೆ. ಸುಮಾರು 5700 ವರ್ಷಗಳಷ್ಟು ಹಳೆಯದಾದ ಚ್ಯೂಯಿಂಗ್ ಗಮ್‌ನ ತುಣುಕನ್ನು 2007ರಲ್ಲಿ ಫಿನ್ಲೆಂಡ್‌ನ ಆರ್ಕಿಯಾಲಜಿ ವಿದ್ಯಾರ್ಥಿ ಕಂಡುಹಿಡಿದಿದ್ದಾನೆ. ಇದನ್ನು ಇದುವರಿಗೆ ಉಪಲಬ್ಧವಿರುವ ಅತಿ ಪುರಾತನ ಚ್ಯೂಯಿಂಗ್ ಗಮ್ ಎಂದು ವಿಜ್ಞಾನಿಗಳು ತೀರ್ಮಾನಿಸಿದ್ದಾರೆ.

ನವಶಿಲಾಯುಗದ ಜನರು ಹಲ್ಲು ಮತ್ತು ಒಸಡಿನ ಸೋಂಕುಗಳಿಗೆ ಚಿಕಿತ್ಸೆ ನೀಡಲು ಚ್ಯೂಯಿಂಗ್ ಗಮ್ ಬಳಸುತ್ತಿದ್ದರು ಎಂದು ನಂಬಲಾಗಿದೆ. ಜೊತೆಗೆ ಈ ಗಮ್‌ನ ತುಂಡಿನ ಮೇಲೆ ಹಲ್ಲಿನ ಮುದ್ರೆಗಳು ಮೂಡಿದ ಬಗೆ ಮತ್ತು ಅವುಗಳಿಂದ ಸಿಕ್ಕ ಮಾಹಿತಿ ಸಂಶೋಧಕರಿಗೆ ಅಚ್ಚರಿ ಮೂಡಿಸಿದೆ.

ಆಧುನಿಕ ಚ್ಯೂಯಿಂಗ್ ಗಮ್‌ಗಳು ಸಾಮಾನ್ಯವಾಗಿ ಪಾಲಿಥೀನ್ ಪ್ಲಾಸ್ಟಿಕ್ ಸುವಾಸನೆ, ಬಣ್ಣ ಮತ್ತು ಕೃತಕ ಸಿಹಿಕಾರಕಗಳನ್ನು ಒಳಗೊಂಡಿರುತ್ತವೆ. ಇದು ಹತ್ತಾರು ಅಥವಾ ನೂರಾರು ವರ್ಷಗಳವರೆಗೆ ಅಂಟಿಕೊಳ್ಳಬಹುದಾದ ಮತ್ತು ಸೂಕ್ತ ವಾತಾವರಣ ಸಿಕ್ಕರೆ ಹೆಚ್ಚು ಕಾಲ ಉಳಿಯಬಹುದಾದಂಥವು. ಆದರೆ ಪ್ರಾಚೀನ ಕಾಲದ ಚ್ಯೂಯಿಂಗ್ ಗಮ್ ಬಿರ್ಚ್‌ಟಾರ್ (ಇದು ಬಿರ್ಚ್ ಮರದ ತೊಗಟೆಯನ್ನು ಬಿಸಿಮಾಡಿದಾಗ ಸಿಗುವ ದ್ರವರೂಪದ ವಸ್ತು) ಮತ್ತು ಇತರ ನೈಸರ್ಗಿಕ ಪದಾರ್ಥಗಳಿಂದ ಮಾಡಲ್ಪಟ್ಟವು. ಕೆಲವು ಆದಿಕಾಲದ ಚ್ಯೂಯಿಂಗ್ ಗಮ್‌ಗಳು ಸಾವಿರಾರು ವರ್ಷಗಳಿಂದ ನೆಲದಲ್ಲಿ ಉಳಿದಿರುವುದು ತಿಳಿದುಬಂದಿದೆ. ಡೆನ್ಮಾರ್ಕಿನಲ್ಲಿ 5700 ವರ್ಷಗಳಷ್ಟು ಹಳೆಯದಾದ ಶಿಲಾಯುಗದ ಗಮ್, ಉತ್ಖನನದ ವೇಳೆ ಸಿಕ್ಕಿದೆ. ಅದು ಮಹಿಳೆ ಬಳಸಿದ್ದು ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಪುರಾತತ್ವ ಶಾಸ್ತ್ರಜ್ಞರಿಗೆ ಈ ಜಿಗುಟಾದ ವಸ್ತುವಿನ ದೀರ್ಘಾಯುಷ್ಯ ಮತ್ತು ಅದನ್ನು ಜಗಿದ ಜನರ ಜೀವನ ವಿಧಾನವನ್ನು ಸೇರಿಸಿ ಅಧ್ಯಯನ ಮಾಡಲು ಸಹಕಾರಿಯಾಗಿದೆ.

ಸ್ಕ್ಯಾಂಡಿನೇವಿಯಾದಲ್ಲಿರುವ ಪುರಾತನ ಕಾಲದ ಬಿರ್ಚ್‌ಗಮ್, ಮಾನವನ ಜಿನೋಮ್ (ಜಿನೋಮ್ ಎಂದರೆ ಒಂದು ಜೀವಿಯ ಸಂಪೂರ್ಣ ಜೆನೆಟಿಕ್ ಮಾಹಿತಿ. ಅದು ಡಿಎನ್‌ಎದಲ್ಲಿ ಸಂಗ್ರಹವಾಗಿರುತ್ತದೆ) ಅರಿಯಲು ಮತ್ತು ಪುನರ್‌ನಿರ್ಮಿಸಲು ಸಹಾಯ ಮಾಡಿವೆ.